IV. ಡೆಪ್ಯೂಟಿ ಕಮ್ಮಿಷನರವರಿಂದ ಅಂಗೀಕರಿಸಲ್ಪಡುವ ಚಡದರಖಾಸ್ತುದಾರನು ಸದರೀ ಗುತ್ತಿಗೆ ಮೊಬಲಗು ಹತ್ತು ರೂಪಾಯಿ ಅಥವಾ ಹತ್ತು ರೂಪಾಯಿಗೆ ಕಮ್ಮಿ ಇದ್ದರೆ ಸದರೀ ದರಖಾಸ್ತು ಪೂರಾ ಮೊಬಲಗು ಹರಾಜು ಮಾಡತಕ್ಕ ಆಫಿಸರಲ್ಲಿ ಆ ಕೂಡ್ಲೆ ಹಾಜರು ಮಾಡಬೇಕು ಮತ್ತು ಹತ್ತು ರೂಪಾಯಿಗೆ ಮೇಲ್ಪಟ್ಟ ಹರಾಜು ಆದ ಸಂದರ್ಭದಲ್ಲಿ ಸಾಲ್ ಗುತ್ತಿಗೆ ಮೊಬಲಗು ಯಷ್ಟು ನಿಷ್ಕರ್ಷೆ ಆಗುತ್ತೆ ಅದರ ಹನ್ನೆರಡರಲ್ಲಿ ಬಂದು ಭಾಗದ ಮೊಬಲಗು ವಡನೆ ಡಿಪಾಜಿಟ್ ಮಾಡಬೇಕು. ಡೆಪ್ಯೂಟಿ ಕಮ್ಮಿಷನರವರ ಮಂಜೂರಿ ತಿಳಿಯಪಡಿಸಿದ 8 ದಿವಸದ ವಳಗಾಗಿ ಹಿಂದೆ ಹಾಜರು ಮಾಡಿದ ಡಿಪಾಜಿಟ್ ಮೊಬಲಗು ಅಲ್ಲದೆ ಜಾಸ್ತಿಯಾಗಿ ಸಾಲ್ ಗುತ್ತಿಗೆ ಮೊಬಲಗಿನ ನಾಲ್ಕರಲ್ಲಿ ಬಂದು ಭಾಗದಷ್ಟು ಮೊಬಲಗು ನಗದಾಗಿಯಾಗಲಿ ಅಥವಾ ಗವರ್ನಮೆಂಟ್ ಪತ್ರ ಮೂಲಕವಾಗಿಯಾಗಲಿ ಅಮಲ್‌ದಾರ್‌ರಲ್ಲಿ ಹಾಜರ್ಮಾಡಬೇಕು ಹಾಗೆ ಗವರ್ನಮೆಂಟ್ ಪತ್ರ ಹಾಜರ್ಮಾಡುವ ಸಂದರ್ಭದಲ್ಲಿ ಕಂಟ್ರಾಕ್ಟು ಷರತ್ತು ನೆರವೇರಿಕೆ ಖಾತ್ರೆಗಾಗಿ ಹಾಜರ್ಮಾಡಿಧೆ ಯಂದು ಸದರೀ ಪತ್ರ ಜೈಲ್ ಡೆಪ್ಯೂಟಿ ಕಮ್ಮಿಷನರವರ ಹೆಸರಿಗೆ ಇಂಡಾರ್ಸ್ ಮಾಡಿ ಕೊಡತಕ್ಕದ್ದಾಗಿ ಇರುತ್ತೆ. ಅಥವಾ ಮೇಲ್ಕಂಡಂತೆ ಕೊಡತಕ್ಕ ಜಾಮೀನಿ ಮೊಬಲಗಾಗಿ ಅರಪಾಣಿ ನಗದಾಗಿಯಾಗಲಿ ಅಥವಾ ಮೇಲ್ಕಂಡಂತೆ ಇಂಡಾರ್ಸ್ ಮಾಡಿ ಕೊಟ್ಟ ಗವರ್ನಮೆಂಟ್ ಪತ್ರ ಮೂಲಕವಾಗಿಯಾಗಲಿ ಬಾಕಿ ಅರ್ಧ ಭಾಗ ಸ್ಥಿರಸೊತ್ತು ಮೂಲಕ ಜಾಮೀನಿ ಕೊಡಬಹುದು ಹಾಗೆ ಆಧಾರ ಮಾಡುವ ಸ್ಥಿರಸೊತ್ತಿನ ಬೆಲೆ ಜಾಮೀನಿ ಮೊಬಲಗಿನ ಎರಡರಷ್ಟು ಬೆಲೆಯುಳ್ಳದ್ದಾಗಿ ಇರಬೇಕು. ಮತ್ತು ಇದರ ಮೇಲೆ ಇತರರ ಹಕ್ಕು ಬಾಧ್ಯತೆ ಯಾವದೂ ಇರಕೂಡದು ನಗದಾಗಿ ಠೇವಣಿ ಇಟ್ಟ ಮೊಬಲಗು ಆಖೈರ್ ಮೂರು ತಿಂಗಳ ಖಿಸ್ತಿನ ಬಗ್ಗೆ ಜಮೇ ಹಿಡಿಯಲ್ಪಡುತ್ತದೆ ಈ ಹರಾಜುದಾರನು ಇದರಲ್ಲಿ ಕಂಡ ಷರತ್ತುಗಳಿಗೆ ಬಳಪಟ್ಟು ನಡಕೊಳ್ಳಲು ಬದ್ಧನಾಗಿರುತ್ತೇನೆಂತ ಕ್ರಮವಾದ ಸ್ಟ್ಯಾಂಪು ಕಾಗದದ ಮೇಲೆ ಮಾಮೂಲ್‌ನಂತೆ ಮುಚ್ಚಳಿಕೆ ಬರಕೊಡತಕ್ಕದ್ದಾಗಿ ಇರುತ್ತೆ.

V. ಮೇಲಿನ ಪ್ಯಾರಾದಲ್ಲಿ ನಿಬಂಧಿಸಿ ಇರುವ ಡಿಪಾಜಿಟ್ ಹಾಜರ್ಮಾಡದೆ ತಪ್ಪಿದರೂ ಅಥವಾ ಮುಚ್ಚಳಿಕೆ ಬರಕೊಡದೆ ತಿರಸ್ಕರಿಸಿದರೂ ಷುರೂ ಹಾಜರ್ಮಾಡಿದ ಡಿಪಾಜಿಟ್ ಮೊಬಲಗು ಸರ್ಕಾರಕ್ಕೆ ಶೇರಿಸಿಕೊಳ್ಳಲ್ಪಡುತ್ತಲ್ಲದೆ ಬಾಬ್ ಪುನಹ ಹರಾಜು ಮೂಲಕವಾಗಿಯಾಗಲಿ ಅಥವಾ ಇತರ ವಿಧವಾಗಿಯಾಗಲಿ ವಿಲೇವಾರಿ ಮಾಡಲ್ಪಡುತ್ತೆ ಹಾಗೆ ಮಾಡುವದರಲ್ಲಿ ಸರ್ಕಾರಕ್ಕೆ ಲುಕ್ಸಾನು ಯೇನಾದರೂ ಸಂಭವಿಸುವ ಪಕ್ಷ ಅಂಥಾ ಮೊಬಲಗು ಕಂದಾಯ ಬಾಕಿಯಂತೆ ಸದರೀಯವನ ಜೆಂದಗಿ ಜಪ್ತಿ ಹರಾಜು ಮೂಲಕ ವಸೂಲ್ಮಾಡಿಕೊಳ್ಳಲ್ಪಡುತ್ತೆ.

VI. ಈಚಲ್ ಕೇಂದಿ ಕಂಟ್ರಾಕ್ಟರ್ ಸಂಬಂಧದಲ್ಲಿ ವಿಧಾಯಕವಾಗಿರುವ ಷರತ್ತುಗಳು ಈ ಬಗ್ಗೆನೀ ಕೇಂದಿ ಇಜಾರೆ ಬಗ್ಗೆಯೂ ಅನ್ವಯಿಸಲ್ಪಡುತ್ತೆ.

VII. ಹಿಂದಿನ ಸಾಲ್‌ಗಳ ಬಗ್ಗೆನೀ ಕೇಂದಿ ಹುಟ್ಟುವಳಿ ಮತ್ತು ಇತರ ತಪ್ಶೀಲ್ ತಿಳಿಯಬೇಕಾಗಿದ್ದರೆ ತಾಲ್ಲೂಕು ಅಮಲ್‌ದಾರ್ರು ಅಥವಾ ಶಿರಸ್ತೇದಾರ್‌ಲ್ಲಿ ದರಖಾಸ್ತು ಕೊಟ್ಟು ತಿಳಕೊಳ್ಳಬಹುದು.

ಡಿ. ನಾಮಕಲ್‌ರಾವ್,
ಅಫಿಷಿಯೇಟಿಂಗ್ ಡೆಪ್ಯೂಟಿ ಕಮ್ಮಿಷನರ್.

ಕಡೂರು ಡಿಸ್ಟ್ರಿಕ್ಟ್.

ಚಿಕ್ಕಮಗಳೂರು ತಾಲ್ಲೂಕು.

ಇಸ್ತಿಹಾರ್‌ನಾಮಾ.

ತಾರೀಖು 11ನೇ ಏಪ್ರೆಲ್ ಸ್ರ 1895ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಚಿಕ್ಕಮಗಳೂರು ತಾಲ್ಲೂಕು ಪಂಡ್ರವಳ್ಳಿ ಗ್ರಾಮದಲ್ಲಿ ಇರುವ ಇದರಡಿ ನಮೂದುಮಾಡಿರುವ ಜಮೀನಿಗೆ ಕಾಫೀ ಸಾಗುವಳಿ ಬಗ್ಯಾಗಿ ದರಖಾಸ್ತು ಬಂದಿರೋಣದರಿಂದ ಸ್ರ 1895ನೇ ಇಸವಿ ಜೂನ್ ತಾರೀಖು 5ನೇ ಬುಧವಾರ ಹಗಲು 11 ಘಂಟೆಗೆ ಡೆಪ್ಯೂಟಿ ಕಮ್ಮಿಷನರ್ ಸಾಹೆಬರವರ ಮಂಜೂರಾತಿಗೆ ವಳಪಡಿಸಿ ಚಿಕ್ಕಮಗಳೂರು ತಾಲ್ಲೂಕು ಅಮಲ್‌ದಾರ್ರ ರೂಬರೂ ಚಿಕ್ಕಮಗಳೂರಿ ಮೊಕ್ಕಾಂನಲ್ಲಿ ಬಹಿರಂಗವಾದ ಹರಾಜು ಮೂಲಕ ಅವುಗಳು ವಿಕ್ರಯಿಸಲ್ಪಡುವವು.

2. ಮಾಮೂಲ್ ಷರತ್ತುಗಳಿಗೆ ವಳಪಟ್ಟು ಬಹಿರಂಗವಾದ ಹರಾಜು ಮೂಲಕ ಸದರೀ ಲೀಲಾವ್ ನಡಿಯತಕ್ಕದ್ದು ಎಕರೆ1ಕ್ಕೆ 10 ರೂಪಾಯಿಗಳ ಮೇರೆ ಆಗುವ ಅಸ್ಸೆಸ್‌ಮೆಂಟ್ಸ್ ಯಾನೆ ನಿಯಮವಾದ ಸರ್ಕಾರ್ ಸವಾಲಿಗೆ ಮೇಲ್ಪಟ್ಟು ಖಾಯಿಷ್ ಮಾಡುವ ಆಖೈರ್ ಚಡದರಖಾಸ್ತುದಾರನಿಗೆ ಮೂರು ವಾರಗಳಿಂದ ಜಮೀನ್ ಹರಾಜನ್ನು ಖೈದ್ ಮಾಡೋಣಾಗುತ್ತದೆ. ಹರಾಜಿನಲ್ಲಿ ಆ ಜಮೀನ್ ದರಖಾಸ್ತುದಾರನಿಗೆ ಆಗುವ ಪಕ್ಷದಲ್ಲಿ ಆತನಿಂದ ಹಾಜರಾಗಿರುವ ನಿಯಮವಾದ ಸರ್ಕಾರ್ ಸವಾಲ್ ಮೊಬಲಗು (ಅಸ್ಸೆಸ್‌ಮೆಂಟ್ಸ್) ಪೈಕಿ ಯಾ ಚವಥಾ ಹಿಸ್ಸೇ ಡಿಪಾಜಿಟ್ ಮೊಬಲಗನ್ನು ಹರಾಜು ಮೊಬಲಗಿನ ಮೇಲೆ ಶೇಕಡಾ 25 ರೂಪಾಯಿಗಳ ಮೇರೆ ಆಗುವ ಡಿಪಾಜಿಟ್ ಮೊಬಲಗು ಭರ್ತಿಗೆ ಜಮಾ ಹಿಡಿಯೋಣಾಗುತ್ತೆ. ಆದರೆ ಆ ಜಮೀನನ್ನು ಹರಾಜಿನಲ್ಲಿ ದರಖಾಸ್ತುದಾರನಲ್ಲದ ಇತರರ್ಯಾರಾದರೂ ಪಡದರೆ ದರಖಾಸ್ತುದಾರನ ಷುರೂ ಠೇವಣಿ ಮೊಬಲಗನ್ನ ವಾಪಸ್ ಮಾಡೋಣಾಗುತ್ತದೆ.

3. ಮೇಲ್ಕಂಡ ಅಸ್ಸೆಸ್‌ಮೆಂಟ್ಸ್ ಯಾನೆ ನಿಯಮವಾದ ಸರಕಾರ್ ಸವಾಲ್ ಮೊಬಲಗಿನಲ್ಲಿ ಸರ್ವೆ ಖರ್ಚು ಮೊಬಲಗು ಮತ್ತು ಸರಕಾರಕ್ಕೇನೇ ಯಾವಾಗಲೂ ಇಟ್ಟುಕೊಳ್ಳಲ್ಪಟ್ಟಿರುವ ಸಂದಲ್ ವಿನಹ ಬಾಕಿ ಯಲ್ಲಾ ಮನ್ನಾ ಜಾತಿ ಮರಗಳ ಮೇಲಿನ ಸರಕಾರದ ಹಕ್ಕು ಇವುಗಳು ಅಡಗಿರುತ್ತವೆ.

4. ಹರಾಜು ಮೊಬಲಗು ಪೈಕಿ ಶೇಕಡಾ 25 ರೂಪಾಯಿಗಳ ಮೇರೆ ಆಗುವ ಠೇವಣಿ ಮೊಬಲಗನ್ನು ಹರಾಜು ಖೈದಾದ ವಡನೆಯೇ 2ನೇ ಪ್ಯಾರಬಲ್ಲಿ ನಮೂದಾಗುವ ಸಂದರ್ಭಾನುಸಾರ ಷುರೂ ಡಿಪಾಜಿಟ್ ಮೊಬಲಗು ಭರ್ತಿಗೆ ವಳಪಟ್ಟು ಆಖೈರ್ ಚಡ ದರಖಾಸ್ತುದಾರ ಕೊಡತಕ್ಕದ್ದು. ಮತ್ತು ಬಾಕಿ ಹಣವನ್ನ ಜಾರಿಯಲ್ಲಿ ಇರುವ ನಿಬಂಧನೆಗಳಲ್ಲಿ ಯುಕ್ತವಾಗಿರುವಂತೆ ಹರಾಜಾದ ತಾರೀಖು ಲಾಗಾಯತು 15ನೇ ದಿವಸ ಸೂರ್ಯಾಸ್ತಮಯಕ್ಕೆ ಮುಂಜೆಯೇ ಆಖೈರ್ ಚಡದರಖಾಸ್ತುದಾರನು ಪಾವತಿ ಮಾಡತಕ್ಕದ್ದು. ವಿಧಾಯಕ ಮಾಡಲ್ಪಟ್ಟ ಕಾಲದೊಳಗೆ ಖರೀದಿ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡದೆ ಡಿಪಾಜಿಟ್ ಮೊಬಲಗಿನಲ್ಲಿ ಖರೀದಿಗಾಗಿ ತಗಲಿರುವ ಖರ್ಚು ವಜಾ ಜಾತಾ ಬಾಕಿನಿಂತ ಠೇವಣಾತಿ ಮೊಬಲಗನ್ನು ಸರಕಾರಕ್ಕೆ ದಂಡವಾಗಿ ಶೇರತಕ್ಕದ್ದು. ಮತ್ತು ಸೊತ್ತು ಪುನಹ ವಿಕ್ರಯಿಸಲ್ಪಡುವದು; ಖರೀದಿ ಮೊಬಲಗನ್ನು ಪಾವತಿ ಮಾಡಲು ತಪ್ಪಿದ ಮನುಷ್ಯನ ಸೊತ್ತಿಗೆ ಯಿದ್ದ ಹಕ್ಕನ್ನು ಕಳದುಕೊಂಡದ್ದಲ್ಲದೆ ಅನಂತರ ಡಿಟೋ ಸೊತ್ತನ್ನು ಹರಾಜು ಮಾಡುವದರಲ್ಲಿ ವುತ್ಪತ್ತಿಯನ್ನು ಮೊಬಲಗಿನ ಯಾವ ಭಾಗದ ಹಕ್ಕೂ ಇಲ್ಲದವನಾಗಿರುತ್ತಾನೆ ಪರಂತು ಈ ಷರತ್ತನ್ನು ಜಾರಿಯಲ್ಲಿ ತರತಕ್ಕದ್ದು. ಅಧಿಕವಾದ ತೊಂದರೆ ಯಿದ್ದಲ್ಲಿ ಯಾವ ಸಂದರ್ಭದಲ್ಲಾದರೂ ಡೆಪ್ಯೂಟಿ

ಕಮ್ಮಿಷನರ್ ಸಾಹೇಬರವರಿಗೆ ತೋರಿಬಂದರೆ ಅಂಥಾವುಗಳನ್ನು ಸರಕಾರದ ಆರ್ಡರ್ ಬ್ಯೈ ಶಿಫಾರಸ್ ಮಾಡತಕ್ಕದ್ದಕ್ಕೆ ಅರ್ಹರಾಗಿರುತ್ತಾರೆ ಕ್ರಮೇಣ ಮಾಡಲ್ಪಟ್ಟ ಹರಾಜಿನಲ್ಲಿ ವುತ್ಪತ್ತಿಯಾಗುವ ಮೊಬಲಗು ಮೊದಲು ಹರಾಜಿನಲ್ಲಿ ಜಡದರಖಾಸ್ತು ಮಾಡಿ ತಪ್ಪಿಹೋದ ಮನುಷ್ಯನ ಸವಾಲಿಗಿಂತಲೂ ಕಮ್ಮಿಯಾಗುವ ಸಂದರ್ಭದಲ್ಲಿ ಅಂಥಾ ವೆತ್ಯಾಸದ ಮೊಬಲಗನ್ನು ಡೆಪ್ಯುಟಿ ಕಮ್ಮಿಷನರವರು ಜಮಿನು ಕಂಪಾಯದ ಬಾಕಿಯಂತೆ ವಸೂಲ ಮಾಡತಕ್ಕದ್ದು.

5. ಈ ನಿಬಂಧನೆಗಳಿಗೆ ವಳಪಟ್ಟು ಹರಾಜಾದ ಜಮಿನನ್ನು ಷುರೂ ಮೂರು ಸಾಲ್ ಆಕಾರವಿಲ್ಲದೆ ಮುಫತ್ತು 4ನೇ 5ನೇ ಸಾಲ್ ಅರ್ಧ ಆಕಾರ 6ನೇ ಸಾಲ್ ಲಾಗಾಯತು ಮತ್ತು ಅನಂತರ ಸಹ ಪೂರಾ ಆಕಾರ ಈ ಮೇರೆ ಕೊಟ್ಟುಕೊಂಡು ಅನುಭವಿಸತಕ್ಕದ್ದು. ಈ ರಿಯಾಯತ್ ಕೊಡುವದಕ್ಕೆ ಮುಂಚೆ ಜಮಿನಿನಲ್ಲಿ ಇರುವ ಸಾಗುವಳಿ ಲಾಯಖ್ ಪ್ರದೇಶವನ್ನು ಸಾಗುವಳಿಗೆ ತರಲು ಪ್ರಾಮಾಣಿಕವಾದ ಪ್ರಯತ್ನ ಮಾಡದೆ ಅದರಲ್ಲಿ ಇರುವ ನಾಟುವನ್ನು ಕತರಾಯಿಸಿಕೊಂಡೇ ಆಗಲಿ ಅದರಲ್ಲಿ ಯಾವ ಭಾಗವನ್ನಾದರೂ ಪೈಲ್ ಮಾಡಿಯೇ ಆಗಲಿ ಸದರೀ ಜಮಿನಿಗೆ ರಿಯಾಯತಿ ಅವಧಿಯಲ್ಲಿ ರಾಜೀನಾಮೆ ಕೊಡುವ ಪಕ್ಷಕ್ಕೆ ಷುರೂ ಸಾಲ್ ಲಾಗಾಯತು ಪೂರಾ ಆಕಾರ ಕೊಡಲುಳ್ಳವನೆಂತ ಬರಹ ಮೂಲಕವಾಗಿ ಹರಾಜುದಾರನು ಮುಚ್ಚಳಿಕೆಯಿಂದ ಬದ್ಧನಾಗಬೇಕು.

ಸರ್ವೆ ನಂಬರ್.	ದರಖಾಸ್ತುದಾರನ ಹೆಸರು.	ಜಮಿನ್ ಹೆಸರು ಮತ್ತು ಇರತಕ್ಕ ಸ್ಥಳ.	ಚತುರ್ಗಡಿ.	ದರಖಾಸ್ತು ಜಮಿನಿನ,		ಷರಾ.
				ಸ್ಟೀರ್ಣ.	ಆಕಾರ.	
32	ಯೆ. ಜೆ. ಸಾಲ್ ಧಾನ.	ಪಂಡ್ಯವಳ್ಳಿ		4311		
			ಪೂರ್ವ ಸರ್ವೆ ನಂ. 34ನೇ ರಾಳೆವೇಂಬ್ರಪ್ಪನವರ ಕಾಫಿತೋಟ			
			ಪಶ್ಚಿಮ ಸರ್ವೆ ನಂಬರ್ 43ನೇ ಗೋಮಾಳ			
			ದಕ್ಷಿಣಕ್ಕೆ ಸರ್ವೆ ನಂ. 44ನೇ ಬ್ಯಾರವಳ್ಳಿ ರಾಮೇಗವ್ವಡನ ತೋಟ			
			ವುತ್ತಕ್ಕೆ ಸರ್ವೆ ನಂ. 31ನೇ ಕಾಫಿ ಸರ್ಕಾರಿ ಬಂಜರ್			
			ಕುಲ್	71	36	
31			ಪೂರ್ವಕ್ಕೆ ಸರ್ವೆ ನಂ. 30ನೇ ಕಾಫಿ ಸರ್ಕಾರಿ ಬಂಜರ್			
			ಪಶ್ಚಿಮಕ್ಕೆ ಸರ್ವೆ ನಂ. 43ನೇ ಜಂಗ್ಲಿ ಮತ್ತು 42ನೇ ನಾಗಂಣ ಬಿ ಭಾಸ್ಕರಯ್ಯನ ಕಾಫೀ ತೋಟ			
			ದಕ್ಷಿಣಕ್ಕೆ ಸರ್ವೆ ನಂ. 32ನೇ ಕಾಫಿ ಸರ್ಕಾರ್ ಬಂಜರ್			
			ವುತ್ತಕ್ಕೆ ಸರ್ವೆ ನಂ. 40ನೇ ಕಾಫೀ ಸರ್ಕಾರಿ ಬಂಜರ್			
			ಕುಲ್	76	38	
40			ಪೂರ್ವಕ್ಕೆ ನಂ. 30ನೇ ಕಾಫಿ ಸರ್ಕಾರಿ ಬಂಜರ್			
			ಪಶ್ಚಿಮಕ್ಕೆ ನಂ. 41ನೇ ಕಾಫಿ ಸರ್ಕಾರಿ ಬಂಜರ್ ಸರ್ವೆ ನಂ. 168ನೇ ತರೀಕೆರೆ ನಾಗಂಣನ ಕಾಫೀ ತೋಟ ಸರ್ವೆ ನಂಬರ್ 50ನೇ ಕಾಫಿ ಸರ್ಕಾರಿ ಬಂಜರ್ ಸರ್ವೆ ನಂ. 51ನೇ ಕಾಫೀ ಸರ್ಕಾರಿ ಬಂಜರ್			
			ದಕ್ಷಿಣಕ್ಕೆ ಸರ್ವೆ ನಂ. 31ನೇ ಕಾಫಿ ಸರ್ಕಾರಿ ಬಂಜರ್ ಹಾಲಿ ದರಖಾಸ್ತು ಸ್ಥಳ.			
			ವುತ್ತಕ್ಕೆ ಸರ್ವೆ ನಂ. 52ನೇ ಜಂಗಲಿ			
			ಇದರಲ್ಲಿ ಇರುವ ನೀರು ಸರ್ಕಲ್‌ನಮೂದು ಮಾಡದೆ ಮಾಮೂಲಿನಂತೆ ಖಾಲಿಬಿಟ್ಟು ಸಾಗುವಳಿ ಮಾಡಬೇಕೆಂತ ಷರತ್ತಿನ ಮೇಲೆ ಹರಾಜು ಮಾಡಿಸುತ್ತೆ ಹರಾಜಿನಲ್ಲಿ ಈ ಜಂಗ್ಲಿ ಪಡೆದವರು ಸದರೀ ಷರತ್ತು ಮುಚ್ಚಳಿಕೆ ಬರಕೊಡಬೇಕು.			

ತಿಳುವಳಿಕೆ ಷರಾ.—ಬಂದು ಸರ್ವೆ ನಂಬರ್ ೨೪ ಕೆಲವು ಜಾಗಾಕ್ಕೆ ದರಖಾಸ್ತು ಬಂದು ಕಚ್ಚಾ ಆಳತೆ ಪ್ರಕಾರ ಆಂದಾಜು ಎಕರೆ ಮೇಲೆ ಅಪ್ಸೆಟ್‌ಪ್ರೈಸ್ ವಸೂಲಾದ್ದರಲ್ಲಿ ಕರಾರುವಾಕ್ ಮೋಜಣೀ ಎಕರಿಗೆ ಗಣನೀಯವಾದಷ್ಟು ಕಮ್ಮಿ ಜಾಸ್ತಿ ಆದರೆ ಜಾಸ್ತಿ ಎಕರೆ ಸಂಬಂಧ ಅಪ್ಸೆಟ್‌ಪ್ರೈಸ್ ವಸೂಲಿ ಕೊಡುವದಕ್ಕೆ ಆಗಲಿ ಕಮ್ಮಿ ಎಕರೆ ಸಂಬಂಧ ವಾಪಸ್ ಪಡಿಯುವದಕ್ಕೆ ಆಗಲಿ ಜಮಿನ್ ಹಿಡುವಳಿದಾರನು ಬದ್ಧವೆ ಅರ್ಹನಾಗಿರಬೇಕು.

ಚಿಕ್ಕ ಮಗಳೂರ ತಾಲ್ಲೂಕು.

ತಾರೀಖು 10ನೇ ಏಪ್ರೆಲ್ ಸ್ ೧೮೯೫ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಚಿಕ್ಕ ಮಗಳೂರ ತಾಲ್ಲೂಕು ಕರಗೂರ ಗ್ರಾಮದಲ್ಲಿ ಇರುವ ಇದರಡಿ ನಮೂದ್ಮಾಡಿರುವ ಜಮಿನಿಗೆ ಕಾಫೀ ಸಾಗುವಳಿ ಬಗ್ಯಾಗಿ ದರಖಾಸ್ತು ಬಂದಿರೋಣದರಿಂದ ಸ್ ೧೮೯೫ನೇ ಇಸವಿ ಜೂನ್ ತಾರೀಖು 6ನೇ ಬ್ರಹಸ್ಪತಿವಾರ ಹಗಲು 11 ಘಂಟೆಗೆ ಕಛೇರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಸಾಹೇಬರವರ ಮುಂಜೂರಾತಿಗೆ ವಳಪಡಿಸಿ ಚಿಕ್ಕ ಮಗಳೂರ ತಾಲ್ಲೂಕು ಅಮಲ್ದಾರ್ರು ರೂಬರೂ ಚಿಕ್ಕ ಮಗಳೂರ ಮೊಕ್ಕಾಂನಲ್ಲಿ ಬಹಿರಂಗವಾದ ಹರಾಜು ಮೂಲಕ ಈ ಆವುಗಳು ವಿಕ್ರಯಿಸಲ್ಪಡುವವು.

2. ಮಾಮೂಲ್ ಷರತ್ತುಗಳಿಗೆ ವಳಪಟ್ಟು ಬಹಿರಂಗವಾದ ಹರಾಜು ಮೂಲಕ ಸದರೀ ಲೀಲಾವ್ ನಡಿಯತಕ್ಕದ್ದು ಎಕರೆ 1ಕ್ಕೆ 10 ಹತ್ತು ರೂಪಾಯಿಗಳ ಮೇರೆ ಆಗುವ ಅಪ್ಸೆಟ್‌ಪ್ರೈಸ್ ಯಾನೆ ನಿಯಮವಾದ ಸರ್ಕಾರಿ ಸವಾಲಿಗೆ ಮೇಲ್ಪಟ್ಟು ಖಾಯಿಷ್